ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 274

**15 ಡಿಸೆಂಬರ್ 2024 * ಭಾನುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

## ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

ಗಾಯನ



ವಿದುಷಿ ಪೃಥ್ವಿ ಭಾಸ್ಕರ್



ವಿದ್ವಾನ್ ಎಂ.ಪಿ. ಕೃತಿಕ್ ಕೌಶಿಕ್
ವಯೊಲಿನ್



ವಿದ್ವಾನ್ ನಂದನ್ ಕಶ್ಯಪ್
ಮೃದಂಗ



ವಿದ್ವಾನ್ ವಿ.ಎಸ್. ರಮೇಶ್
ಮೋರ್ಚಿಂಗ್

ಸರ್ವರಿಗೂ ಹಾರ್ದಿಕ ಸುಸ್ವಾಗತ

**ವಿದುಷಿ ಪೃಥ್ವಿ ಭಾಸ್ಕರ್‌ರವರು** ಭರವಸೆಯ ಉದಯೋನ್ಮುಖ ಕಲಾವಿದರು. ಸಂಗೀತದ ಹಿನ್ನೆಲೆಯ ಕುಟುಂಬದಿಂದ ಬಂದವರು. ತಾತ ಮೈಸೂರಿನ ಹಿರಿಯ ತಲೆಮಾರಿನ ಪಿಟೀಲು ವಾದಕ ವಿದ್ವಾನ್ ಎಚ್.ಕೆ. ನರಸಿಂಹಮೂರ್ತಿಯವರು. ತಂದೆ ಅಂತಾರಾಷ್ಟ್ರೀಯ ಖ್ಯಾತಿಯ ವಯೊಲಿನ್ ವಾದಕ ವಿದ್ವಾನ್ ಎಚ್.ಎನ್. ಭಾಸ್ಕರ್. ಇವರು ಅಜ್ಜಿ ವಿದುಷಿ ಎಚ್.ಎಸ್. ರಾಜಲಕ್ಷ್ಮಿಯವರ ಬಳಿ ಸಂಗೀತದ ಮೊದಲ ಪಾಠಗಳನ್ನು ಕಲಿತರು. ತಾತ ವಿದ್ವಾನ್ ನರಸಿಂಹಮೂರ್ತಿಯವರಲ್ಲಿ ವಯೊಲಿನ್ ಕಲಿಕೆಯನ್ನು ಪ್ರಾರಂಭಿಸಿದರು. ಅನಂತರ ಒಂದು ದಶಕದವರೆಗೆ ತಂದೆ ವಿದ್ವಾನ್ ಭಾಸ್ಕರ್‌ರವರ ಬಳಿ ವಯೊಲಿನ್ ವಾದನ ಮತ್ತು ಹಾಡುಗಾರಿಕೆಯ ಅಭ್ಯಾಸ ಮುಂದುವರಿಯಿತು. ಪಂ. ಪ್ರಭು ರಾವ್‌ರವರ ಬಳಿ ಹಿಂದೂಸ್ತಾನಿ ಸಂಗೀತವನ್ನೂ ಕಲಿತರು. ಬಹುಮುಖ ಸಾಂಸ್ಕೃತಿಕ ಹಿನ್ನೆಲೆಯುಳ್ಳವರು ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ ಗಾಯನ ಪ್ರಸ್ತುತಿ ಪಡಿಸಿದ್ದಾರೆ. ಕರ್ನಾಟಕ ಸರ್ಕಾರದ ನೆಹರೂ ಬಾಲಭವನ ನೀಡುವ "ಬಾಲ ಕಲಾಶ್ರೀ" ಪ್ರಶಸ್ತಿ (2015), ನಾದಬ್ರಹ್ಮ ಸಂಗೀತ ಸಭೆಯ "ಅತ್ಯುತ್ತಮ ವಯೊಲಿನ್ ವಾದಕಿ" ಪ್ರಶಸ್ತಿ (2013), ನಾದಮಯ ಮ್ಯೂಸಿಕ್ ಫೌಂಡೇಷನ್ನಿನ "ಅತ್ಯುತ್ತಮ ಗಾಯಕಿ" ಪ್ರಶಸ್ತಿ (2024) ಮೊದಲಾದ ಪುರಸ್ಕಾರಗಳು ಲಭಿಸಿವೆ. ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯ ಮತ್ತು ರಾಜ್ಯ ಸರ್ಕಾರಗಳ ಶಿಷ್ಯವೇತನಗಳಿಗೆ ಪಾತ್ರರಾಗಿರುವುದು ಮತ್ತೊಂದು ಹಿರಿಮೆ.

**ವಿದ್ವಾನ್ ಎಂ.ಪಿ. ಕೃತಿಕ್ ಕೌಶಿಕ್‌ರವರು** ಇಂದು ತುಂಬ ಬೇಡಿಕೆಯಲ್ಲಿರುವ ಯುವಪ್ರತಿಭೆ. ಕರ್ನಾಟಕ ಕಲಾಶ್ರೀ ವಿದ್ವಾನ್ ಡಾ. ಎಸ್. ನಟರಾಜಮೂರ್ತಿಯವರಲ್ಲಿ ಪ್ರಾರಂಭಿಕ ಶಿಕ್ಷಣ. ಬಳಿಕ ಕೆಲ ಕಾಲ ಹಿರಿಯ ಕಲಾವಿದ ವಿದ್ವಾನ್ ಎಚ್.ಕೆ. ನರಸಿಂಹಮೂರ್ತಿಯವರ ಬಳಿ ಅಧ್ಯಯನ. ಪ್ರಸ್ತುತ ವಿದ್ವಾನ್ ಎಚ್.ಎನ್. ಭಾಸ್ಕರ್‌ರವರ ಬಳಿ ಶಿಷ್ಯವೃತ್ತಿ ಮುಂದುವರಿದಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಶಿಷ್ಯವೇತನ ಪಡೆದಿದ್ದಾರೆ. ಬೆಂಗಳೂರು ಆಕಾಶವಾಣಿಯ "ಬಿ–ಹೈ" ಶ್ರೇಣಿ ಕಲಾವಿದರು. ಪ್ರತಿಷ್ಠಿತ ಸಂಗೀತೋತ್ಸವಗಳಲ್ಲಿ ಮತ್ತು ಪ್ರಾತ್ಯಕ್ಷಿಕೆಗಳಲ್ಲಿ ಪಾಲ್ಗೊಂಡಿದ್ದಾರೆ. ಪ್ರಮುಖ ಕಲಾವಿದರಾಗಿ ಮತ್ತು ಸಾಥೀದಾರರಾಗಿ ಯಶಸ್ಸು ಪಡೆದಿದ್ದಾರೆ. ಚೆನ್ನೈನ ಮ್ಯೂಸಿಕ್ ಅಕ್ಯಾಡೆಮಿಯಿಂದ "ಸಂಗೀತ ಮುದ್ರಾ" ಪ್ರಶಸ್ತಿ, "ಎಚ್‌ಸಿಎಲ್ ಬೆಸ್ಟ್ ಕನ್ಸರ್ಟ್ ಸೀರೀಸ್ 2022" ಪ್ರಶಸ್ತಿ, ಮೈಸೂರಿನ ನಾದಬ್ರಹ್ಮ ಸಂಗೀತ ಸಭೆಯಿಂದ "ಅತ್ಯುತ್ತಮ ಪಕ್ಕವಾದ್ಯ ಕಲಾವಿದ" ಪ್ರಶಸ್ತಿ,

ತಿರುಚ್ಚಿಯ ರಸಿಕರಂಜನೀ ಸಭೆಯು ಆಯೋಜಿಸಿದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ – ಇವು ಲಭಿಸಿರುವ ಕೆಲವು ಪ್ರಮುಖ ಗೌರವಗಳು.

**ವಿದ್ವಾನ್ ನಂದನ್ ಕಶ್ಯಪ್‌ರವರು** ಚೆನ್ನೈನ ಗುರುನಾನಕ್ ಕಾಲೇಜಿನ ಎಂಬಿಎ ಪದವೀಧರರು; ಆಕಾಶವಾಣಿ ಮತ್ತು ದೂರದರ್ಶನಗಳ 'ಬಿ' ಶ್ರೇಣಿ ಕಲಾವಿದರು. ಮೈಸೂರಿನ ವಿದ್ವಾನ್ ವಿ.ಎಸ್. ರಮೇಶ್‌ರವರ ಬಳಿ ಪ್ರಾರಂಭಿಕ ಶಿಕ್ಷಣ. ಕಳೆದ ಐದು ವರ್ಷಗಳಿಂದ ಚೆನ್ನೈನ ಪ್ರಸಿದ್ಧ ಮೃದಂಗ ಕಲಾವಿದ ಡಾ. ಪತ್ರಿ ಸತೀಶ್ ಕುಮಾರ್‌ರವರ ಬಳಿ ಶಿಷ್ಯವೃತ್ತಿ ಮುಂದುವರಿಕೆ. ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಶಿಷ್ಯವೇತನ ಪಡೆದಿದ್ದಾರೆ. ಬೆಂಗಳೂರಿನ ನಾದಮಯ ಮ್ಯೂಸಿಕ್ ಫೌಂಡೇಷನ್ನಿನ "ಅತ್ಯುತ್ತಮ ಮೃದಂಗ ಕಲಾವಿದ", "ಅತ್ಯುತ್ತಮ ಸಹಕಲಾವಿದ" ಪ್ರಶಸ್ತಿಗಳು (2023) ಹಾಗೂ ಮೈಸೂರಿನ ನಾದಬ್ರಹ್ಮ ಸಂಗೀತ ಸಭೆಯ "ಉತ್ತಮ ಮೃದಂಗ ವಿದ್ವಾನ್" ಪ್ರಶಸ್ತಿ (2024) ಇವು ದೊರೆತಿರುವ ಕೆಲವು ಪ್ರಮುಖ ಪ್ರಶಸ್ತಿಗಳು.

**ವಿದ್ವಾನ್ ವಿ.ಎಸ್. ರಮೇಶ್‌ರವರು** ಲಯವಾದ್ಯ ವಿಶಾರದರು. ಮೋರ್ಚಿಂಗ್, ಮೃದಂಗ ಹಾಗೂ ಘಟಂ ವಾದನಗಳಲ್ಲಿ ಪರಿಣತರು. ಸಂಗೀತದ ಕೌಟುಂಬಿಕ ಹಿನ್ನೆಲೆ ಹೊಂದಿದವರು. ಗಾನಕಲಾಭೂಷಣ ವಿದ್ವಾನ್ ಪಿ.ಜಿ. ಲಕ್ಷ್ಮೀನಾರಾಯಣರವರ ಶಿಷ್ಯರು. ಮೈಸೂರು ಆಕಾಶವಾಣಿಯ ಮೋರ್ಚಿಂಗ್ ವಾದನದ 'ಎ' ಶ್ರೇಣಿ ಕಲಾವಿದರು. ಸಂಗೀತ ಕಲಾತಪಸ್ವಿ, ಕಲಾದೀಪ್ತಿ ಮುಂತಾದ ಪುರಸ್ಕಾರಗಳಿಗೆ ಪಾತ್ರರಾಗಿದ್ದಾರೆ.

# ಬೆಳದಿಂಗಳ ಸಂಗೀತ 275

## 13 ಜನವರಿ 2025

**ಗಾಯನ**

**ವಿದ್ವಾನ್ ಸಾಯಿ ವಿಘ್ನೇಶ್**

**ವಯೊಲಿನ್**

**ವಿದ್ವಾನ್ ಎಚ್.ಎನ್. ಭಾಸ್ಕರ್**





**ಮೃದಂಗ**

**ವಿದ್ವಾನ್ ಸುಮೇಶ್ ನಾರಾಯಣ್**

**ಘಟಂ**

**ವಿದುಷಿ ಸುಕನ್ಯ ರಾಮ್‌ಗೋಪಾಲ್**

---

**ಫೋನ್: 0821–2548221, 2548223 * ಇಮೇಲ್: sutturmath@jssonline.org**